# ಸಂಬಂಜದ ಹೊಸ ಹುಟ್ಟು



**ಸಹೃದಯರ** ನಡುವೆ 'ಹಾಡುಪಾಡು ರಾಮು' ಎಂದು ಪರಿಚಿತರಾದ ಮೈಸೂರಿನ ಟಿ.ಎಸ್. ರಾಮಸ್ವಾಮಿ ಪತ್ರಕರ್ತರಾಗಿ ಸೃಜನಶೀಲ ಮನಸ್ಸುಗಳೊಂದಿಗೆ ನಿರಂತರವಾಗಿ ಸಂವಾದ ನಡೆಸಿದವರು. 'ಹಾಡುಪಾಡು' ಎನ್ನುವುದು ಅವರು ರೂಪಿಸುತ್ತಿದ್ದ ಪತ್ರಿಕೆಯ ಪುರವಣಿಯ ಶೀರ್ಷಿಕೆಯಷ್ಟೇ ಆಗಿರದೆ, ಕೃತ್ರಿಮಗಳಿಲ್ಲದ ಬದುಕಿನೊಂದಿಗಿನ ಅನುಸಂಧಾನವೂ ಆಗಿತ್ತು.

ಲೇಖಕನಷ್ಟೇ ಮುಖ್ಯವಾದ ಹಾಗೂ ಸೃಜನಶೀಲವಾದ 'ಓದುಗ' ಪರಂಪರೆಯೊಂದು ಕನ್ನಡದಲ್ಲಿದೆ. ಆ ಪರಂಪರೆಯ ಭಾಗವಾದ ರಾಮು ಅವರು ಆಪ್ತ ಮಾತುಕತೆಯಲ್ಲಿ ಕಟ್ಟಿಕೊಡುತ್ತಿದ್ದ ಒಳನೋಟಗಳು ಕೃತಿ ಹಾಗೂ ಕೃತಿಕಾರರ ಅಂತರಂಗವನ್ನು ಬೆಳಗುವಷ್ಟು ಉಜ್ವಲವಾಗಿರುತ್ತಿದ್ದವು. ಕಾವ್ಯದ ಬಗ್ಗೆ ಅವರಿಗೆ ವಿಶೇಷ ಪ್ರೀತಿ. ಕಾವ್ಯ ಅವರ ಜೀವದ್ರವ್ಯ. ಸ್ವತಃ ಕವಿಯಾಗಿದ್ದರೂ ತಮ್ಮ ಕಾವ್ಯವನ್ನು ಮುನ್ನೆಲೆಗೆ ಬರಲು ಬಿಡದೆ, ಇತರರ ಪದ್ಯಗಳನ್ನು ಓದುವುದರಲ್ಲಿ ಚರ್ಚಿಸುವುದರಲ್ಲಿ ಅವರಿಗೆ ಇನ್ನಿಲ್ಲದ ಆಸಕ್ತಿ. ಯಾವುದೇ ಲೇಖಕನಿಗೆ ಆಭರಣದಂತಿರಬೇಕಾದ ಲಜ್ಜೆಯ ಮೂರ್ತರೂಪದಂತೆ 'ಬರಹಗಾರ ರಾಮು' ಅವರಿದ್ದರು. ಲಜ್ಜೆ ಅವರ ಪಾಲಿಗೆ ಮೌಲ್ಯವಾಗಿತ್ತು. ಆ ಮೌಲ್ಯದ ಕಾರಣದಿಂದಲೇ ತಮ್ಮ ಕವಿತೆಗಳನ್ನು ಪ್ರಕಟಿಸುವ ಬಗ್ಗೆ ಅವರು ಉತ್ಸಾಹ ವ್ಯಕ್ತಪಡಿಸಲಿಲ್ಲ. ಆದರೂ, ಕಾವ್ಯಪ್ರೇಮಿ ಪ್ರಕಾಶಕರ ಕಾರಣದಿಂದಾಗಿ ರಾಮು ಅವರ ಮೂರು ಕವನ ಸಂಕಲನಗಳು ('ಅಗ್ನಿಸೂಕ್ತ', 'ರಾಮು ಪದ್ಯಗಳು', 'ವಿಷ್ಣು ಕ್ರಾಂತಿ ಮತ್ತು ಇತರ ಪದ್ಯಗಳು') ಪ್ರಕಟಗೊಂಡಿವೆ.

'ನೆಲಗನ್ನಡ ಮಹಾಭಾರತ' ರಾಮು ಅವರ ಮಹತ್ವಾಕಾಂಕ್ಷೆಯ ರಚನೆ. ಕನ್ನಡದ ಕವಿಮನಸ್ಸು ಮಹಾಭಾರತದೊಂದಿಗೆ ನಿರಂತರ ಅನುಸಂಧಾನ ನಡೆಸಿದೆಯಷ್ಟೇ. ಆ ಅನುಸಂಧಾನದ ಹೊಸ ಪರ್ವದಂತೆ ನೋಡಬಹುದಾದ 'ನೆಲಗನ್ನಡ ಮಹಾಭಾರತ' ಸಂಕಥನ, ಮಹಾಭಾರತದ ಸಮಗ್ರರೂಪವಲ್ಲ; ಕವಿಗೆ ಮುಖ್ಯವೆನ್ನಿಸಿದ ಸಂಗತಿಗಳ ಮೂಲಕ ಮಹಾಕಾವ್ಯದ ಸ್ವಾರಸ್ಯ ಕೆಡದಂತೆ ಸಹೃದಯರಿಗೆ ಮುಟ್ಟಿಸುವ ಪ್ರಯತ್ನವಿದು. ಮಹಾಭಾರತದ ಮುಖ್ಯ ಪಾತ್ರಗಳೇ ಜೀವಗೊಂಡು ನಮ್ಮೊಂದಿಗೆ ಸಂಭಾಷಿಸುವ ಮೂಲಕ ತಮ್ಮೊಳಗನ್ನು ತೋಡಿಕೊಳ್ಳುವ ರೂಪದಲ್ಲಿ ನಿರೂಪಣೆಗೊಂಡಿರುವ ಈ ವಿಶಿಷ್ಟ ಕೃತಿ, 'ನೆಲಗನ್ನಡ'ದ ಚೆಲುವು, ಲಯ, ನಾಟಕಗುಣ ಹಾಗೂ ಒಳನೋಟಗಳಿಂದ ಸಹೃದಯರನ್ನು 'ಭಾರತ ವಿಹಾರ'ಕ್ಕೆ ಆಹ್ವಾನಿಸುತ್ತದೆ.

ಸಂಬಂಜ ಅನ್ನೋದು ದೊಡ್ಡದು ಕನಾ ಎನ್ನುವ ದೇವನೂರ ಮಹಾದೇವ ಅವರ 'ಕುಸುಮಬಾಲೆ'ಯ ಮಾತು 'ನೆಲಗನ್ನಡ ಮಹಾಭಾರತ'ಕ್ಕೆ ಹೊಂದುತ್ತದೆ. ಈ ಕೃತಿ ಪ್ರಕಟಗೊಳ್ಳುವ ಮೊದಲೇ ರಾಮು ತೀರಿಕೊಂಡರು (ನಿಧನ: ಜೂನ್ 13, 2023). ಗೆಳೆಯನ ಅನುಪಸ್ಥಿತಿಯಲ್ಲಿ ರಾಮು ಅವರ ಮಹಾಭಾರತ ಸಂಕಥನವನ್ನು ದೇವನೂರ ಮಹಾದೇವ ಅವರು ಕೈಗೆತ್ತಿಕೊಂಡು, ಗೆಳೆಯನ ಉಸಿರಿಗೆ ತಮ್ಮ ಉಸಿರನ್ನೂ ಸೇರಿಸಿದ್ದಾರೆ. 'ರಾಮುಕನ್ನಡ' ದೇವನೂರರ ಅಕ್ಕರೆಯಲ್ಲಿ ಮತ್ತಷ್ಟು ಜೀವಗೊಂಡು ಸದ್ಯದ ರೂಪ ತಳೆದಿದೆ. ಈ ಕೃತಿಗೊಂದು ಸ್ಪಷ್ಟ ರೂಪ ಕೊಡುವಲ್ಲಿ ದೇವನೂರರ ಶ್ರಮ ಹಾಗೂ ಆಸ್ಥೆ ದೊಡ್ಡದು – ಸಂಬಂಜ ದೊಡ್ಡದು ಎನ್ನುವ ಮಾತಿಗೆ ಜೀವ ತುಂಬುವಂತಹದ್ದು. 'ನೆಲಗನ್ನಡ ಮಹಾಭಾರತ' ಕೃತಿ ದೇವನೂರರ ಮೂಲಕ ರಾಮು ಅವರಿಗೆ ಸಲ್ಲುತ್ತಿರುವ ವಿಶಿಷ್ಟ ಗೌರವ ಆಗಿರುವಂತೆಯೇ, ಪ್ರಸಕ್ತ ಕೃತಿಯ ಓದು ಕನ್ನಡದ ವಿಶಿಷ್ಟ ಬರಹಗಾರರೊಬ್ಬರನ್ನು ಓದುಗರ ಎದೆಗೆ ಹಾಕುವ ಹಂಬಲವೂ ಹೌದು.

ಆಳಸಿಂಗಾಚಾರ್ಯ, ಎ.ಆರ್. ಕೃಷ್ಣಶಾಸ್ತ್ರಿ ಹಾಗೂ ಬ್ಯುಟೆನಿನ್‌ನ ಕೃತಿಗಳನ್ನು ಆಕರಗಳನ್ನಾಗಿಸಿಕೊಂಡಿರುವ ಈ ಕೃತಿ, ಮಹಾಭಾರತವನ್ನು ಈ ಮಣ್ಣಿನ ಕಣ್ಣು–ಕನ್ನಡದೊಂದಿಗೆ ಬೆರೆಸುವ ಅನನ್ಯ ಪ್ರಯತ್ನ. 'ಮಹಾಭಾರತದೊಳಗಿಂದ ಒಂದಿಷ್ಟು' ಕಾಣಿಸುವ ಪ್ರಯತ್ನದ ಈ ಮಾಲಿಕೆಯ ಮೂಲಕ ರಾಮು–ದೇವನೂರರ ಸಂಬಂಜದ ವರ್ತುಲದೊಳಗೆ 'ಸುಧಾ' ಓದುಗರೂ ಸೇರುತ್ತಿದ್ದಾರೆ.

ಅವಳನ್ನು ಅಡ್ಡಹಾಕಿ ಬಲವಂತವಾಗಿ ಹಿಡಿದ. ಇವನಿಂದ ಬಿಡಿಸಿಕೊಳ್ಳಲು ಅವಳೂ ಶಕ್ತಿ ಬಿಟ್ಟು ಕೊಸರಾಡಿದಳು.

ಅವನಆತ್ಮವನ್ನುಕಾಮಬಳಸುಹಾಕಿಕೊಂಡುಬಿಟ್ಟಿತ್ತು. ಮಾದ್ರಿಯನ್ನು ಸಂಭೋಗಿಸುವುದು ಬಿಟ್ಟು ಬೇರೇನೂ ತೋಚಲೇ ಇಲ್ಲ. ಬದುಕು ತುದಿಗೆ ಬಂತು. ಶಾಪದ ಭಯ ಹೊರಟುಹೋಗಿತ್ತು. ಕಾಮದ ಕೈಗೆ ಬುದ್ಧಿ ಕೊಟ್ಟು ಯಮನನ್ನೇ ಮೋಹಿಸಿದ. ಹೆಂಡತಿಯನ್ನು ಕೂಡಿ ಧರ್ಮಾತ್ಮ ಪಾಂಡು ಕಾಲದ ಕೈಗೆ ಬಿದ್ದ.

ಗಂಡನ ಜೀವ ಹೋಯಿತು. ಅವನನ್ನು ಇನ್ನೂ ಬಿಗಿಯಾಗಿ ಅಪ್ಪಿಕೊಂಡಳು ಮಾದ್ರಿ. ಬಿಕ್ಕಿ ಬಿಕ್ಕಿ ಅಳುತ್ತಾ ದನಿ ಮಾಡಿದಳು. ಆ ದನಿ ಕೇಳಿ ತನ್ನ ಮಕ್ಕಳನ್ನು ಮಾದ್ರಿಯ ಮಕ್ಕಳನ್ನು ಕರೆದುಕೊಂಡು ರಾಜನಿದ್ದೆಡೆಗೆ ಕುಂತಿ ಬಂದಳು.

ಆಗ ಮಾದ್ರಿ, 'ನೀನು ಒಬ್ಬಳೇ ಬಾ. ಮಕ್ಕಳು ಅಲ್ಲೇ ಇರಲಿ' ಅಂದಳು.

ಆ ಮಾತು ಕೇಳಿ 'ಸತ್ತೆನಲ್ಲಪ್ಪಾ' ಎಂದು ಮಕ್ಕಳನ್ನು ಅಲ್ಲೇ ಬಿಟ್ಟು ಓಡಿ ಬಂದಳು ಕುಂತಿ.

ಪಾಂಡುವೂ ಮಾದ್ರಿಯೂ ನೆಲದಲ್ಲಿ ಮಲಗಿರುವ ರೀತಿ ಕಂಡೇ ಅವಳಿಗೆ ದುಃಖ ಉಮ್ಮಳಿಸಿತು. ಗೋಳಿಟ್ಟಳು.

**ಕುಂತಿ:** ಅಲ್ಲಾ, ದಿನವೂ ನಾನು ಇವನನ್ನು ಎಚ್ಚರದಿಂದ ಎಷ್ಟು ಜೋಪಾನ ಮಾಡಿದ್ದೆ. ನೀನೇಕೆ ಹೀಗೆ ಮಾಡಿದೆ. ಅರಣ್ಯವಾಸಿಗಳ ಶಾಪ ಗೊತ್ತಿದ್ದೂ ಅವನನ್ನು ಕಾಯ್ದುಕೊಳ್ಳಬೇಕಾದ ನೀನೇ ಏಕಾಂತಕ್ಕೆ ಯಾಕೆ ಸೆಳೆದೆ. ದಿನಾ ಆ ಶಾಪ ನೆನೆಯುತ್ತಾ ನೆನೆಯುತ್ತಾ ಮಂಕು ಹಿಡಿದ ಮುಖದಲ್ಲೇ ಇದ್ದ ಇವನಿಗೆ ಇದ್ದಕಿದ್ದ ಹಾಗೆ ಮುಖ ಗೆಲುವಾದದ್ದು ಹೇಗೋ. ಬಾಹ್ಲೀಕನ ಮಗಳೇ – ನೀನೇ ಧನ್ಯೆ, ಭಾಗ್ಯವಂತೆ. ರಾಜನ ನಗುತ್ತಾ ಇರುವ ಮುಖ ನೋಡಿದೆಯಲ್ಲಾ.

**ಮಾದ್ರಿ:** ಗೋಗರೆದೆ, ಬೇಡ ಅಂದೆ, ಆದಷ್ಟು ತಡೆದೆ. ಆ ಶಾಪವನ್ನು ನಿಜ ಮಾಡಲು ಹೋದನೋ ಏನೋ ನನ್ನ ಬಿಡಲೇ ಇಲ್ಲ.

**ಕುಂತಿ:** ನಾನು ಮೊದಲ ಹೆಂಡತಿ. ಧರ್ಮದ ಮೊದಲ ಫಲವೂ ನನ್ನದೇ. ಈಗ ನಾನು ಮಾಡಬೇಕಾದ ಕೆಲಸ ಇದೆ. ತಡೆಯ ಬೇಡ. ಅವನನ್ನ ಬಿಡು. ಮೇಲೇಳು. ಈ ಕಡೆ ಬಾ. ನೀ ಮಕ್ಕಳನ್ನ ನೋಡಿಕೋ, ಸತ್ತಿರುವವನ ಜೊತೆಗೆ ನಾನು ಹೋಗುತ್ತೇನೆ. ಆತ್ಮವಂತರಾದ ಮಕ್ಕಳನ್ನು ಪಡೆದೆ. ಆದರೂ ವೀರ ಪತ್ನಿ ಅನಿಸಿಕೊಳ್ಳಬೇಕು ನಾನು.

**ಮಾದ್ರಿ:** ನೋಡು ಅಕ್ಕ, ಅವನು ಎಂದೂ ಪಲಾಯನ ಮಾಡಿದವನಲ್ಲ. ಈಗ ಅರ್ಧದಲ್ಲೇ ಹೋಗಿಬಿಟ್ಟಿದಾನೆ. ನನ್ನ ಕಾಮ ಇನ್ನೂ ತೀರಿಲ್ಲ. ಅವನ ಹಿಂದೇನೇ ಹೋಗುತ್ತೇನೆ. ನೀನು ದೊಡ್ಡವಳು. ಒಪ್ಪಿಗೆ ಕೊಡು.

ಅವನು ನನ್ನನ್ನು ಕಾಮಿಸಿ ಬಂದ. ಕೂಡಿದ. ಮುಗಿಸದೆ ಸತ್ತ. ಅವನ ಕಾಮ ತೀರಿಸುವುದಕ್ಕೆ ನಾನೇ ಅಲ್ಲವೇ ಹೋಗಬೇಕಾದವಳು.

ನೋಡು, ನನ್ನ ಮಕ್ಕಳ ಜತೆ ನಡಕೊಳ್ಳುವ ಹಾಗೇ ನಿನ್ನ ಮಕ್ಕಳ ಜೊತೆಗೂ ನಡಕೊಳ್ಳುವುದು ನನ್ನ ಕೈಲಿ ಆಗಲ್ಲ. ಇದರಿಂದ ನನಗೆ ಪಾಪ ಸುತ್ತಿಕೊಂಡೇ ತೀರುತ್ತದೆ. ಆದರೆ ನೀನು, ನನ್ನ ಮಕ್ಕಳನ್ನೂ ನಿನ್ನ ಮಕ್ಕಳ ಹಾಗೇ ನೋಡಿಕೊಳ್ಳತೀಯಾ.

ನೀನಿಲ್ಲಿರು ಅವರನ್ನ ನೋಡಿಕೋ, ನಾನು ನನ್ನ ರಾಜನ ಪ್ರೇತದ ಹಿಂದೆ ಹೋಗತೇನೆ. ಇದಕೆ ಒಪ್ಪಿಕೋ.